**ಕೋರ್ಸ್‌ನ ವಿವರ**

ಬಾಬಾಸಾಹೇಬ್ ಡಾ. ಬಿ. ಆರ್. ಅಂಬೇಡ್ಕರ್ ಅಧ್ಯಯನ ಮತ್ತು ಸಂಶೋಧನ ಕೇಂದ್ರದಲ್ಲಿ ಎರಡು ಕೋರ್ಸ್‌ಗಳು ಚಾಲನೆಯಲ್ಲಿರುತ್ತದೆ.

೧. **ಪಿ.ಜಿ ಡಿಪ್ಲೋಮ** (ಅಂಬೇಡ್ಕರ್ ಅಧ್ಯಯನ) ೨. ಸರ್ಟಿಫಿಕೇಟ್ ಕೋರ್ಸ್ **(ದಲಿತ ಚಳುವಳಿ)**

2014–15 ದಾಖಲಾತಿಯಲ್ಲಿ ಒಟ್ಟು 20 ಜನ ವಿದ್ಯಾರ್ಥಿಗಳು ಪ್ರವೇಶವನ್ನು ಪಡೆದಿದ್ದರು. ಇದರಲ್ಲಿ 13 ಪುರುಷ ವಿದ್ಯಾರ್ಥಿಗಳು, ವಿದ್ಯಾರ್ಥಿನಿಯರು 07 ಪಿ.ಜಿ ಡಿಪ್ಲೋಮ ಅಂಬೇಡ್ಕರ್ ಅಧ್ಯಯನಕ್ಕೆ ಪ್ರವೇಶವನ್ನು ಪಡೆದಿದ್ದರು. ಅವರಲ್ಲಿ SC–12, ST– 03 ವಿದ್ಯಾರ್ಥಿಗಳು ಇದ್ದರು. ದಲಿತ ಚಳುವಳಿ (ಸರ್ಟಿಫಿಕೇಟ್ ಕೋರ್ಸ್)ಗೆ 12 ವಿದ್ಯಾರ್ಥಿಗಳು ಪ್ರವೇಶವನ್ನು ಪಡೆದಿದ್ದರು. ಇದರಲ್ಲಿಯೂ ಸಹ ವಿದ್ಯಾರ್ಥಿಗಳು 09, ವಿದ್ಯಾರ್ಥಿನಿಯರು 03 ಪ್ರವೇಶವನ್ನು ಪಡೆದಿದ್ದರು. ಅದರಲ್ಲಿ SC–8 ST– 03 2B–01 ವಿದ್ಯಾರ್ಥಿಗಳು ಇದ್ದರು.

**ಏಪ್ರಿಲ್ 01 2014 ರಿಂದ 31 ಮಾರ್ಚ್ 2015ನೇ ಸಾಲಿನಲ್ಲಿ ನಡೆದ ಸಮ್ಮೇಳನಗಳು, ಕಾರ್ಯಾಗಾರಗಳು, ವಿಚಾರಸಂಕಿರಣಗಳು ಮತ್ತು ಇತರ ಚಟುವಟಿಕೆಗಳು :**

1. ದಿನಾಂಕ: 10–04 2014 ರಂದು ಡಾ.ಬಿ.ಆರ್. ಅಂಬೇಡ್ಕರ್ ಅಧ್ಯಯನ ಮತ್ತು ಸಂಶೋಧನ ಕೇಂದ್ರ ಹಾಗೂ ಸಂಬುದ್ಧ ಪ್ರಕಾಶನ ಇವರ ಸಂಯುಕ್ತ ಆಶ್ರಯದಲ್ಲಿ ಅಂಬೇಡ್ಕರ್ ಚಿಂತನೆಯ ಆಯಾಮಗಳು ಎಂಬ ವಿಷಯ ಕುರಿತು ಕಾರ್ಯಾಗಾರವನ್ನು ಆಯೋಜಿಸಲಾಗಿತ್ತು. ಕಾರ್ಯಕ್ರಮದ ಉದ್ಘಾಟನೆಯನ್ನು ಮಾನ್ಯ ಕುಲಪತಿಗಳಾದ ಡಾ. ಬಿ. ತಿಮ್ಮೇಗೌಡರವರು ನೆರವೇರಿಸಿದರು ಮತ್ತು ಕಾರ್ಯಕ್ರಮದ ಅಧ್ಯಕ್ಷತೆಯನ್ನು ಡಾ. ಸಿದ್ಧಲಿಂಗಯ್ಯನವರು, ಡಾ. ಬಿ. ಆರ್. ಅಂಬೇಡ್ಕರ್ ಅಧ್ಯಯನ ಮತ್ತು ಸಂಶೋಧನ ಕೇಂದ್ರ ಇವರು ವಹಿಸಿದ್ದರು.

   ಮುಖ್ಯ ಅತಿಥಿಗಳಾಗಿ ಡಾ. ಎನ್ ದಶರಥ್ ಸಹ ಪ್ರಾಧ್ಯಾಪಕರು ಬೆಂಗಳೂರು ವಿಶ್ವವಿದ್ಯಾಲಯದ ಕಾನೂನು ಕಾಲೇಜು, ಇವರು ಹಾಜರಾಗಿದು, ಡಾ. ಪ್ರಮೀಳಾ ಮಾಧವ್ ಲೇಖಕರು ಮತ್ತು ಸಂಸ್ಕೃತಿ ಚಿಂತಕರು ವಿಷಯವನ್ನು ಮಂಡಿಸಿದ್ದರು ಹಾಗೂ ಶ್ರೀ ಮಂಗ್ಳೂರು ವಿಜಯ, ಲೇಖಕರು ಇವರು ಸಹ ಉಪಸ್ಥಿತರಿದ್ದರು.

2. ದಿನಾಂಕ: 14–4 2014 ರಂದು ಡಾ. ಬಿ. ಆರ್. ಅಂಬೇಡ್ಕರ್‌ರವರ 123ನೇ ಜನ್ಮ ದಿನಾಚರಣೆಯನ್ನು ವಿಶ್ವವಿದ್ಯಾಲಯ ಹಾಗೂ ಡಾ. ಬಿ. ಆರ್. ಅಂಬೇಡ್ಕರ್ ಅಧ್ಯಯನ ಮತ್ತು ಸಂಶೋಧನ ಕೇಂದ್ರವು ವಿಜೃಂಭಣೆಯಿಂದ ಅಚರಿಸಿತು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಮಾನ್ಯ ಕುಲಪತಿಗಳಾದ ಡಾ. ಬಿ. ತಿಮ್ಮೇಗೌಡರವರು ವಹಿಸಿದ್ದರು. ಮುಖ್ಯ ಅತಿಥಿಗಳಾಗಿ ಶ್ರೀ. ವೀರಭದ್ರ ಚನ್ನಮಲ್ಲಸ್ವಾಮೀಜಿ ಮಾನವ ಧರ್ಮಪೀಠ, ಗೂಳೂರು ರವರು ಭಾಗವಹಿಸಿದ್ದರು.

   ಡಾ. ಎಲ್. ಶಿವಲಿಂಗಯ್ಯರವರು ನಿವೃತ್ತ ಮುಖ್ಯ ಅಭಿಯಂತರರು ಕರ್ನಾಟಕ ಸರ್ಕಾರ ಹಾಗೂ ಡಾ. ಓ. ಅನಂತರಾಮಯ್ಯ ರವರು ವಿಶ್ರಾಂತ ಕುಲಪತಿಗಳು ತುಮಕೂರು ವಿಶ್ವವಿದ್ಯಾಲಯು ಇವರು

   ಮುಖ್ಯ ಭಾಷಣಕರಾರಾಗಿ ಬಾಗವಹಿಸಿದ್ದರು. ಜೊತೆಗೆ ಸಂಜೆ ಶ್ರೀ ಜನಾರ್ಧನ (ಜನ್ನಿ) ನಿರ್ದೇಶಕರು ರಂಗಾಯಣ ಮೈಸೂರು, ಇವರಿಂದ ಸಾಂಸ್ಕೃತಿಕ ಕಾರ್ಯಕ್ರಮ ಮತ್ತು ಜಾನ್ ದೇವರಾಜ್‌ರವರ ನಿರ್ದೇಶನದ "ಏಂಜಲ್ಸ್ ಆಫ್ ಹೆಲ್ ಸಿನಿಮಾ ಪ್ರದರ್ಶನ"ವನ್ನು ಏರ್ಪಡಿಸಲಾಗಿತ್ತು. ಕಾರ್ಯಕ್ರಮದಲ್ಲಿ ಬೆಂಗಳೂರು ವಿಶ್ವವಿದ್ಯಾಲಯದ ಕುಲಸಚಿವರಾದ ಕೆ. ಕೆ. ಸೀತಮ್ಮರವರು ಮೌಲ್ಯಮಾಪನ ಕುಲಸಚಿವರಾದ ಡಾ. ಕೆ. ಎನ್. ನಿಂಗೇಗೌಡರವರು ಹಾಗೂ ವಿತ್ತಾಧಿಕಾರಿಗಳಾದ ಶ್ರೀ ರಾಮಣ್ಣ ಅವರು ಉಪಸ್ಥಿತರಿದ್ದರು.

3. ದಿನಾಂಕ 26–08–2014 ರಂದು ಪ್ರಥಮ ದಲಿತ ಹೋರಾಟಗಾರ ಅಯ್ಯನ್‌ಕಾಳಿ ಅವರ 151ನೇ ಜನ್ಮದಿನಾಚರಣೆಯನ್ನು ಡಾ. ಬಿ. ಆರ್. ಅಂಬೇಡ್ಕರ್ ಅಧ್ಯಯನ ಮತ್ತು ಸಂಶೋಧನ ಕೇಂದದಿಂದ ಆಚರಿಸಲಾಯಿತು. ಕಾರ್ಯಕ್ರಮದ ಉದ್ಘಾಟನೆಯನ್ನು ಮಾನ್ಯ ಕುಲಪತಿಗಳಾದ ಡಾ. ಬಿ. ತಿಮ್ಮೇಗೌಡರವರು ನೆರವೇರಿಸಿದರು. ಈ ಕಾರ್ಯಕ್ರಮದ ಅಧ್ಯಕ್ಷತೆಯನ್ನು ಡಾ. ಸಿದ್ಧಲಿಂಗಯ್ಯನವರು ವಹಿಸಿದ್ದರು. ಡಾ. ಪ್ರಮೀಳಾ ಮಾಧವ್ ಲೇಖಕರು ಮತ್ತು ಸಂಸ್ಕೃತಿ ಚಿಂತಕರು ಇವರು ಮುಖ್ಯ ಭಾಷಣಕಾರರಾಗಿ ಭಾಗವಹಿಸಿದ್ದರು ಹಾಗೂ ವಿತ್ತಾಧಿಕಾರಿಗಳಾದ ಶ್ರೀ ನಾಗರಾಜ್ ಶೇರೇಗಾರ್‌ರವರು ಅಯ್ಯನ್ ಕಾಳಿಯವರ ಭಾವಚಿತ್ರಕ್ಕೆ ಮಾಲಾರ್ಪಣೆ ಮಾಡಿದರು.

4. ದಿನಾಂಕ: 06–09–2014ರಂದು ಡಾ. ಬಿ. ಆರ್. ಅಂಬೇಡ್ಕರ್ ಅಧ್ಯಯನ ಮತ್ತು ಸಂಶೋಧನಾ ಕೇಂದ್ರ ಹಾಗೂ ನ್ಯಾಷನಲ್ ಪದವಿ ಕಾಲೇಜು ಇವರ ಜಂಟಿ ಆಶ್ರಯದಲ್ಲಿ ಅಂಬೇಡ್ಕರ್ ವಿಶೇಷ ಉಪನ್ಯಾಸ ಮಾಲಿಕೆಯ ಮೊದಲ ಉಪನ್ಯಾಸ "ವಿದ್ಯಾರ್ಥಿಗಳಿಗೆ ಅಂಬೇಡ್ಕರ ಸಂದೇಶ'' ಎಂಬ ವಿಚಾರ ಸಂಕಿರಣವನ್ನು ಹಮ್ಮಿಕೊಳ್ಳಲಾಗಿತ್ತು ಕಾರ್ಯಕ್ರಮದ ಉದ್ಘಾಟನೆಯನ್ನು ಮಾನ್ಯ ಕುಲಪತಿಗಳಾದ ಡಾ. ಬಿ. ತಿಮ್ಮೇಗೌಡರವರು ನೆರವೇರಿಸಿದರು. ಈ ಕಾರ್ಯಕ್ರಮದ ಅಧ್ಯಕ್ಷತೆಯನ್ನು ಡಾ. ಎ. ಎಚ್. ರಾಮರಾವ್, ಅಧ್ಯಕ್ಷರು, ನ್ಯಾಷನಲ್ ಎಜುಕೇಷನ್ ಸೊಸೈಟಿ, ಕರ್ನಾಟಕ, ಇವರು ವಹಿಸಿದ್ದರು. ಪ್ರೊ. ರವಿವರ್ಮಕುಮಾರ್ ಅಡ್ವೊಕೇಟ್ ಜನರಲ್, ಕರ್ನಾಟಕ ಸರ್ಕಾರ,

ಇವರು ಉಪನ್ಯಾಸ ನೀಡಿರುತ್ತಾರೆ. ಡಾ. ಸಿದ್ಧಲಿಂಗಯ್ಯ ನಿರ್ದೇಶಕರು ಹಾಗೂ ಪ್ರೊ. ಶಿರೀನ್ ನೆಡುಂಗಾಡಿ ಪ್ರಾಂಶಪಾಲರು ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು.

5. 12–09–2014ರಂದು ಬಾಬಾಸಾಹೇಬ್ ಡಾ. ಬಿ. ಆರ್. ಅಂಬೇಡ್ಕರ್ ಅಧ್ಯಯನ ಮತ್ತು ಸಂಶೋಧನಾ ಕೇಂದ್ರ, ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು, ಹಾಗೂ ಜೀವಿಕ ಜೀತ ವಿಮುಕ್ತಿ ಕರ್ನಾಟಕ– ಬಂಧನಮುಕ್ತ ಜೀವನ ಇವರ ಸಹಯೋಗದೊಂದಿಗೆ "ಕರ್ನಾಟಕದಲ್ಲಿ ಜೀತ ಪದ್ಧತಿ ಇನ್ನೂ ಜೀವಂತ ಇದೆಯೇ?'' ಕುರಿತು ವಿಚಾರ ಸಂಕಿರಣವನ್ನು ನಡೆಸಲಾಯಿತು. ಈ ಕಾರ್ಯಕ್ರಮದ ಉದ್ಘಾಟನೆಯನ್ನು ಮಾನ್ಯ ಶ್ರೀ ಶಿವಾಜಿ ಗಣೇಶನ್ ಅಧ್ಯಕ್ಷರು ಜೀತ ಪದ್ಧತಿ ಅಸ್ತಿತ್ವದ ಬಗ್ಗೆ ರಾಜ್ಯ ಮಟ್ಟದ ಮರಿಶೀಲನಾ ಸಮಿತಿ, ಕರ್ನಾಟಕ ಇವರು ನೆರವೇರಿಸಿದರು. ಈ ಕಾರ್ಯಕ್ರಮದ ಮುಖ್ಯ ಅತಿಥಿಗಳಾಗಿ ಡಾ. ಸಿದ್ಧಲಿಂಗಯ್ಯನವರು ಭಾಗವಹಿಸಿದ್ದರು. ಕಾರ್ಯಕ್ರಮದಲ್ಲಿ ಶ್ರೀ ಕಿರಣ ಕಮಲ ಪ್ರಸಾದ್ ಸಂಚಾಲಕರು ಜೀವಿಕ ಸಂಸ್ಥೆ, ಇವರು ಸಹ ಉಪಸ್ಥಿತರಿದ್ದರು.

6. ದಿನಾಂಕ 16–09–2014ರಂದು ಡಾ. ಬಿ. ಆರ್. ಅಂಬೇಡ್ಕರ್ ಅಧ್ಯಯನ ಮತ್ತು ಸಂಶೋಧನಾ ಕೇಂದ್ರ ಹಾಗೂ ಶೇಷಾದ್ರಿಪುರಂ ಪ್ರಥಮ ದರ್ಜೆ ಕಾಲೇಜು, ಯಲಹಂಕ ಇವರ ಜಂಟಿ ಆಶ್ರಯದಲ್ಲಿ ಅಂಬೇಡ್ಕರ್ ವಿಶೇಷ ಉಪನ್ಯಾಸ ಮಾಲಿಕೆಯ ಎರಡನೆ ಉಪನ್ಯಾಸ ಮಾಲೆಯಲ್ಲಿ "ಅಂಬೇಡ್ಕರ ಮತ್ತು ಮಹಿಳಾ ಸಬಲೀಕರಣ" ಎಂಬ ವಿಚಾರ ಸಂಕಿರಣವನ್ನು ಹಮ್ಮಿಕೊಳ್ಳಲಾಗಿತ್ತು. ಈ ಕಾರ್ಯಕ್ರಮದ ಅಧ್ಯಕ್ಷತೆಯನ್ನು ಡಾ. ಎಸ್ ಎನ್. ವೆಂಕಟೇಶ್ ಪ್ರಾಂಶುಪಾಲರು, ಶೇಷಾದ್ರಿಪುರಂ ಪ್ರಥಮ ದರ್ಜೆ ಕಾಲೇಜು ಯಲಹಂಕ ವಹಿಸಿದ್ಧರು ಶ್ರೀ ಮಂಗ್ಳೂರು ವಿಜಯ ಇವರು ಮುಖ್ಯ ಭಾಷಣಕಾರರಾಗಿ ಭಾಗವಹಿಸಿದ್ದರು. ಡಾ. ಎಂ ಪ್ರಕಾಶ್, ನಿರ್ದೇಶಕರು, ಶೇಷಾದ್ರಿಪುರಂ ಪ್ರಥಮ ದರ್ಜೆ ಕಾಲೇಜು, ಯಲಹಂಕ ಇವರು ಮುಖ್ಯ ಅತಿಥಿಗಳಾಗಿ ಭಾಗವಹಿಸಿದ್ಧರು ಸಮಾರಂಭದಲ್ಲಿ ಡಾ. ಸಿದ್ಧಲಿಂಗಯ್ಯನವರು ಉಪಸ್ಥಿತರಿದ್ದರು.

7. ದಿನಾಂಕ 11–10–2014ರಂದು ಡಾ. ಬಿ. ಆರ್. ಅಂಬೇಡ್ಕರ್ ಅಧ್ಯಯನ ಮತ್ತು ಸಂಶೋಧನಾ ಕೇಂದ್ರ ಹಾಗೂ ಆಕಾಶವಾಣಿ ಪ್ರಸಾರ ಭಾರತಿ, ಬೆಂಗಳೂರು ಇವರ ಸಂಯುಕ್ತ ಆಶ್ರಯದಲ್ಲಿ ಡಾ. ಬಿ. ಆರ್. ಅಂಬೇಡ್ಕರ್‌ರವರ 'ಬದುಕು–ಚಿಂತನೆಗಳ ತೌಲನಿಕ ಅವಲೋಕನ'ಎಂಬ ವಿಚಾರ ಸಂಕಿರಣವನ್ನು ಸೆನೆಟ್ ಹಾಲ್, ಸೆಂಟ್ರಲ್ ಕಾಲೇಜು, ಬೆಂಗಳೂರು ವಿಶ್ವವಿದ್ಯಾಲಯ ಇಲ್ಲಿ ಆಯೋಜಿಸಲಾಗಿತ್ತು ಕಾರ್ಯಕ್ರಮದ ಉದ್ಘಾಟನೆಯನ್ನು ಮಾನ್ಯ ಕುಲಪತಿಗಳಾದ ಡಾ. ಬಿ.ತಿಮ್ಮೇಗೌಡರವರು ನೆರವೇರಿಸಿದರು. ಡಾ. ಬಸವರಾಜ ಸಾದರ, ಕೇಂದ್ರ ನಿರ್ದೇಶಕರು ಆಕಾಶವಾಣಿ ಇವರು ಆಶಯ ನುಡಿಯನ್ನು ನೇರೆವೇರಿಸಿರುತ್ತಾರೆ. ಡಾ.ಬಿ.ಆರ್. 'ಅಂಬೇಡ್ಕರ್‌ರವರ ಬದುಕು ಮತ್ತು ಸಮಗ್ರ ಸಾಧನೆ' ಎಂಬ ವಿಷಯವಾಗಿ ಡಾ. ಎಚ್. ಚಂದ್ರಶೇಖರ್ ವಿಶ್ರಾಂತ ಸಮಕುಲಪತಿಗಳು, ಕರ್ನಾಟಕ ಕೇಂದ್ರೀಯ ವಿಶ್ವವಿದ್ಯಾಲಯ, ಗುಲ್ಬರ್ಗ ಇವರು ವಿಶೇಷ ಉಪನ್ಯಾಸವನ್ನು ನೀಡಿರುತ್ತಾರೆ. ಈ ಕಾರ್ಯಕ್ರಮದ ಅಧ್ಯಕ್ಷತೆಯನ್ನು ಡಾ. ಸಿದ್ಧಲಿಂಗಯ್ಯನವರು ವಹಿಸಿದ್ದರು.

ಎರಡು ಗೋಷ್ಠಿಗಳು ನಡೆದಿರುತ್ತವೆ. ಮೊದಲನೆ ಗೋಷ್ಟಿಯಲ್ಲಿ ಡಾ. ಟಿ ಎಂ. ಬಾಸ್ಕರ್, ಶ್ರೀ. ರಂಜಾನ್ ದರ್ಗಾ ಹಾಗೂ ಡಾ. ಸಿದ್ದನಗೌಡ ಪಾಟೀಲ ಇವರುಗಳು ವಿಷಯಗಳನ್ನು ಮಂಡಿಸಿರುತ್ತಾರೆ.

ಎರಡನೆ ಗೊಷ್ಠಿಯಲ್ಲಿ ಡಾ. ನಟರಾಜ್ ಹುಳಿಯಾರ್, ಶ್ರೀ. ಡಿ.ಎಸ್.ನಾಗಭೂಷಣ್ ಮತ್ತು ಪ್ರೊ. ಆರ್. ಎಲ್. ಎಂ. ಪಾಟೀಲ ಇವರುಗಳು ವಿಷಯಗಳನ್ನು ಮಂಡಿಸಿರುತ್ತಾರೆ.

ಕಾರ್ಯಕ್ರಮದಲ್ಲಿ ಶ್ರೀ ಡಿ. ಅರ್. ರಾಜಪ್ಪ ಮತ್ತು ಸಂಗಡಿಗರಿಂದ ಜನಪದ ಗೀತೆ ಕಾರ್ಯಕ್ರಮವನ್ನು ನೀಡಿರುತ್ತಾರೆ. ಕಾರ್ಯಕ್ರಮದ ಧ್ವನಿಮುದ್ರಣ ಪ್ರಸಾರವನ್ನು ಆಕಾಶವಾಣಿಯ ಎಲ್ಲಾ ಬಾನುಲಿ ಕೇಂದ್ರ ಹಾಗೂ ಎಫ್.ಎಂ. ರೇನ್‌ಬೋದಿಂದ ಪ್ರಸಾರವಾಗಿರುತ್ತದೆ.

8. 58ನೇ ಧಮ್ಮ ದೀಕ್ಷಾ ದಿನಾಚರಣೆ :–ಅಂಬೇಡ್ಕರ್‌ರವರು ಸಮಾನತೆ, ಸಹೋದರತ್ವವನ್ನು ಸಾರುವ ಬೌದ್ಧಧರ್ಮವನ್ನು ಸ್ವೀಕರಿಸಿದ ದಿನವನ್ನಾಗಿ 28–10–2014 ರಂದು ಕಾರ್ಯಕ್ರಮವನ್ನು ರೂಪಿಸಲಾಗಿತ್ತು. ಈ ಕಾರ್ಯಕ್ರಮದಲ್ಲಿ ಬೌದ್ಧ ಬಿಕ್ಕುಗಳಾದ ಪೂಜ್ಯ ಡಾ.ರಾಜಾನಂದಮೂರ್ತಿ ಬೋಧ್ ಬುದ್ಧ ವಂದನೆ ನೀಡಿದರು. ಕಾರ್ಯಕ್ರಮದ ಉದ್ಘಾಟನೆಯನ್ನು ಮಾನ್ಯ ಕುಲಪತಿಗಳಾದ ಡಾ. ಬಿ.ತಿಮ್ಮೇಗೌಡರವರು ನೆರವೇರಿಸಿದರು. ಡಾ. ಎಮ್ ವಿ. ವಸು ಪ್ರಾಧ್ಯಾಪಕರು, ಇತಿಹಾಸ ವಿಭಾಗ ಇವರು ವಿಶೇಷ ಉಪನ್ಯಾಸವನ್ನು ನೀಡಿರುತ್ತಾರೆ. ಈ ಕಾರ್ಯಕ್ರಮದ ಅಧ್ಯಕ್ಷತೆಯನ್ನು ಡಾ. ಸಿದ್ಧಲಿಂಗಯ್ಯನವರು ವಹಿಸಿದ್ದರು.

9. ಡಾ. ಬಿ.ಆರ್. ಅಂಬೇಡ್ಕರ್ ರವರ 58ನೇ ಮಹಾಪರಿನಿರ್ವಾಣದಿನವನ್ನು 6–12–2014ರಂದು ಹಮ್ಮಿಕೊಳ್ಳಲಾಗಿತ್ತು. ಕಾರ್ಯಕ್ರಮದ ಉದ್ಘಾಟನೆ ಮತ್ತು "ಪ್ರಜ್ಞಾ ತ್ರೈಮಾಸಿಕ ಸಂಚಿಕೆ"0ಯ ಬಿಡುಗಡೆಯನ್ನು ಮಾನ್ಯ ಶ್ರೀ ಎಚ್. ಆಂಜನೇಯನವರು ಸಮಾಜ ಕಲ್ಯಾಣ ಮತ್ತು ಹಿಂದುಳಿದ ವರ್ಗಗಳ ಸಚಿವರು, ಕರ್ನಾಟಕ ಸರ್ಕಾರ ಇವರು ನೆರವೇರಿಸಿದರು. ಮುಖ್ಯ ಅತಿಥಿಗಳಾಗಿ ಮಾನ್ಯ ಕುಲಪತಿಗಳಾದ ಡಾ. ಬಿ.ತಿಮ್ಮೇಗೌಡರವರು ಆಗಮಿಸಿದ್ದರು. ಈ ಕಾರ್ಯಕ್ರಮದ ಅಧ್ಯಕ್ಷತೆಯನ್ನು ಡಾ. ಸಿದ್ಧಲಿಂಗಯ್ಯನವರು ವಹಿಸಿದ್ದರು.

10. ದಿನಾಂಕ 26–01–2015 ರಂದು ಸಂವಿಧಾನ ದಿನಾಚರಣೆ ಮತ್ತು ಡಾ. ಬಿ. ಆರ್. ಅಂಬೇಡ್ಕರ್ ಜೀವನವನ್ನು ಒಳಗೊಂಡ ಕ್ಯಾಲೆಂಡರ್ ಬಿಡುಗಡೆ ಕಾರ್ಯಕ್ರಮದ ಉದ್ಘಾಟನೆಯನ್ನು ಮಾನ್ಯ ಕುಲಪತಿಗಳಾದ ಡಾ. ಬಿ.ತಿಮ್ಮೇಗೌಡರವರು ನೆರವೇರಿಸಿದರು. ಈ ಕಾರ್ಯಕ್ರಮದ ಅಧ್ಯಕ್ಷತೆಯನ್ನು ಡಾ. ಸಿದ್ಧಲಿಂಗಯ್ಯನವರು ವಹಿಸಿದ್ದರು. ಮುಖ್ಯ ಅತಿಥಿಗಳಾಗಿ ಡಾ. ಎಚ್. ಆರ್. ಸುರೇಂದ್ರರವರು ಸಂವಿಧಾನದ ಮುಖ್ಯ ಅಂಶಗಳನ್ನು ಕುರಿತು ಮಾತನಾಡಿದರು.